ಗಳು ಖಾಲಿಯಾಗಿವೆ. ಅವರು ಅರ್ಜಿಯನ್ನು ಹಾಕಿಕೊಳ್ಳಬಹುದು. ಅವರಿಗೆ ೫೫ ವರ್ಷಗಳು ವಯಸ್ಸಿನ ವಿನಾಯಿತಿಯು ಸಹ ಇದೆ.

ಶ್ರೀ ಜಿ.ರಾಜಂಗೌಡ.—ಸರ್ಕಾರದವರು ಕೊಟ್ಟಿರತಕ್ಕಂತಹ ಆರ್ಡರಿನಲ್ಲಿ ಟೆಂಪರರಿ ಎಂದು ಎಲ್ಲಿಯೂ ಹೇಳಿಲ್ಲ. ಬೇಕಾದರೆ ಮಾನ್ಯ ಮಂತ್ರಿಗಳಿಗೆ ನಾನು ತಂದು ತೋರಿಸುತ್ತೇನೆ. ಆದ್ದರಿಂದ ಮಾನವೀಯ ದೃಷ್ಟಿಯಿಂದ ೧೦೦ ರೂಪಾಯಿಗಳನ್ನು ಜಾಸ್ತಿ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಅವರು ಹೈಕೋರ್ಟಿಗೆ ರಿಟ್ ಹೋಗಿದ್ದಾರೆ. ಹೈಕೋರ್ಟಿನವರ್ ಏನು ತೀರ್ಮಾನ ಕೊಡುತ್ತಾರೆಯೋ ನೋಡೋಣ.

೩೧೨ನೆ ನಿಯಮದ ಮೇರೆಗೆ :

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ದರೋಡೆ ವಿಷಯ

ಶ್ರೀ ಪಿ. ರಾಮಪ್ಪ.—ಮಾನ್ಯ ಅಧ್ಯಕ್ಷರೇ ನಮ್ಮ ಬೆಂಗಳೂರು ನಗರದ ಇತಿಹಾಸದಲ್ಲಿಯೇ ಇಂತಹ ಭಯಾನಕ ದರೋಡೆ ನಡೆದಿಲ್ಲ ಎಂದು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಡಕಾಯಿತಿ ದರೋಡೆಗಳು ನಡೆದಿದ್ದರೂ ನಡೆದಿರಬಹುದು. ಏಕೆಂದರೆ ಅಲ್ಲಿ ಅಂತಹ ಬಲವಾದ ಪೋಲೀಸಿನವರು ಇರುವುದಿಲ್ಲ. ಆದರೆ ನಮ್ಮ ಕರ್ನಾಟಕ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಪೋಲೀಸ್ ಪಡೆ ಇರುವಾಗ ಇಂತಹ ದರೋಡೆ ನಡೆದಿರುವುದು ತುಂಬಾ ಶೋಚನೀಯವಾದುದು. ಸುಮಾರು ೧೫ ದಿವಸಗಳಲ್ಲಿ ೪ ಕಡೆ ದರೋಡೆ ನಡೆದಿದೆ. ಇದರಿಂದ ನಿಜವಾಗಿಯೂ ಕೂಡ ನನಗನಿಸುತ್ತದೆ ಇಲ್ಲಿ ಸರ್ಕಾರ ಇದೆಯೇ, ಏನ್ನತಕ್ಕಂತಹದ್ದನ್ನು ನಾವು ವಿವರ ಮಾಡಬೇಕಾಗಿದೆ. ಫೆಬ್ರುವರಿ ೨೫ನೇ ತಾರೀಖು ಕೋರಮಂಗಲದಲ್ಲಿ ದರೋಡೆಯಾಗಿದೆ. ಮತ್ತೆ ೬ನೇ ತಾರೀಖು ಹೆಚ್.ಎ.ಎಲ್.ನಲ್ಲಿ ದರೋಡೆಯಾಗಿದೆ. ಮತ್ತೆ ೭ನೇ ತಾರೀಖು ಎರ್ ಇಂಜಿನ್ ಫ್ಯಾಕ್ಟರಿಯಲ್ಲಿ ದರೋಡೆಯಾಗಿದೆ. ಇದಾದ ನಂತರ ಮತ್ತೇ ಮಾರ್ಚಿ ೧೦ನೇ ತಾರೀಖು ಕೋರಮಂಗಲದ ಕಾನ್ಸೈಂಟ್‌ನಲ್ಲಿ ದರೋಡೆಯಾಗಿದೆ. ಇಲ್ಲಿ ದರೋಡೆ ಮಾಡಿದವರು ಯಾವ ರೀತಿ ಡ್ರೆಸ್ ಹಾಕಿದ್ದರೂ ಆದೇ ರೀತಿಯಲ್ಲಿ ಅದೇ ಮುಖವಾಡದಲ್ಲಿ ಇದ್ದರು ಮತ್ತು ಅದೇ ಚಾಕು, ಅದೇ ಚೂರಿ, ಅದೇ ಸ್ಟೈಲ್, ಅದೇ ಶೈಲಿಯಲ್ಲಿ ಮಾತನಾಡುವುದು ೨೫ನೇ ತಾರೀಖಿನಿಂದ ಮಾರ್ಚಿ ೧೦ನೇ ತಾರೀಖಿನವರೆವಿಗೂ ಸುಮಾರು ೪ ಕಡೆ ದರೋಡೆ ಮಾಡಿದ್ದಾರೆ ಎಂದರೆ ನಮ್ಮ ರಾಜ್ಯದಲ್ಲಿ ಪೋಲೀಸಿನವರು ಸತ್ತಿದ್ದಾರೆಯೇ ಅಥವಾ ಬದುಕಿದ್ದಾರೆಯೇ ಎನ್ನುವ ಪ್ರಶ್ನೆಯನ್ನು ನಾನು ಮಾಡಬೇಕಾಗಿದೆ. ಇದರಿಂದ ಜನರಿಗೆ ಒಂದು ರೀತಿಯಲ್ಲಿ ಗಾಬರಿಯನ್ನುಂಟು ಮಾಡಿದೆ. ಈ ಡಕಾಯಿತಿ ಮಾಡಿರುವವರ ಬಗ್ಗೆ ಪತ್ರಿಕೆಯಲ್ಲಿ ಓದಿದರೆ ಎಂತಹವರಿಗೂ ಕೂಡ ಮನಸ್ಸಿನಲ್ಲಿ ಒಂದು ತರಹ ಭೀತಿಯುಂಟಾಗುತ್ತದೆ. ಇದರಿಂದ ಬೆಂಗಳೂರಿನ ಜನರು ತಲ್ಲಣಗೊಂಡಿದ್ದಾರೆ. ಬೆಂಗಳೂರಿನಲ್ಲಿ ಯಾರಾದರೂ ದಾರಿಯಲ್ಲಿ ಹೋಗುವಾಗ ಹಿಡಿದುಕೊಂಡು ರಾಬರಿ ಮಾಡಿದ್ದಾರೆ ಎಂದು ಕೇಳಿದ್ದೇನೆ. ಬೀಗ ಹಾಕಿರುವ ಮನೆಗಳಲ್ಲಿ ಕಳ್ಳತನಗಳು ನಡೆದಿವೆ ಎಂದು ಕೇಳಿದ್ದೇನೆ. ಆದರೆ ಮನೆಯಲ್ಲಿಯೇ ಜನರು ಇರುವಾಗ ಆದೂ ರಾತ್ರಿ ವೇಳೆಯಲ್ಲಿ ಬಾಗಿಲನ್ನು ಒಡೆದು ಕಿಟಕಿಯ ಬಾಗಿಲನ್ನು ಮುರಿದು ದರೋಡೆ ಮಾಡಿದ್ದಾರೆ ಎಂದು ನಾನು ಕರ್ನಾಟಕದ ಚರಿತ್ರೆಯಲ್ಲಿಯೇ ಎಲ್ಲೂ ಕೇಳಿಲ್ಲ. ನಾನು ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಪೋಲೀಸ್ ಕಮೀಷನರ್‌ರವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ ನಾವು ಇಬ್ಬರನ್ನು ದಸ್ತಗಿರಿ ಮಾಡಿದ್ದೇವೆ. ಅವರು ಹಿಂದಿಯನ್ನು ಮಾತನಾಡುತ್ತಾರೆ. ಹರಕು ಮುರಕು ಇಂಗ್ಲೀಷ್ ಮಾತನಾಡುತ್ತಾರೆ. ದಕ್ಷಿಣ ಇಂಡಿಯಾದವರು ಅಲ್ಲ. ಅವರು ಉತ್ತರ ಇಂಡಿಯಾದವರು ಎಂದು ಹೇಳಿದ್ದಾರೆ. ಮತ್ತೇ ಅವರನ್ನು ಪತ್ರಿಕಾ ಸಮ್ಮೇಳನಕ್ಕೆ ಕರೆದುಕೊಂಡು ಬಂದು ಪ್ರೊಡ್ಯೂಜ್ ಮಾಡಿದ್ದಾರೆ. ಅವರು ಪತ್ರಿಕಾ ಸಮ್ಮೇಳನದಲ್ಲಿ ಹಿಂದಿಯಲ್ಲಿ ಮಾತನಾಡಿದ್ದಾರೆ. ಪತ್ರಿಕಾ ವರದಿಗಾರರಿಗೆ ಹೆಚ್ಚಿಗೆ ಪ್ರಶ್ನೆಗಳನ್ನು ಕೇಳಬೇಡಿ ಎಂದು ಸಹ ಹೇಳಿದ್ದಾರೆ. ಈ ರೀತಿ ದಸ್ತಗಿರಿ ಮಾಡಿದ ಮೇಲೆಯೂ ಸಹ ದರೋಡೆಯಾಗಿದೆ. ಪೋಲೀಸ್ ಕಮೀಷನರ್‌ರನವರು ದೆಹಲಿ, ರಾಜಸ್ಥಾನ, ಮಹಾರಾಷ್ಟ್ರ ಮುಂತಾದ ಕಡೆಗಳಿಗೆ ರಾಜ್ಯದ ಉನ್ನತ ೪೦ ಜನ ಅಧಿಕಾರಿಗಳನ್ನು ಕಳುಹಿಸಿಕೊಟ್ಟಿದ್ದಾರೆ ದು ಸಹ ಹೇಳಿದ್ದಾರೆ. ಆದರೂ ಕೂಡ ದರೋಡೆ ನಡೆದಿದೆ. ಇದರಿಂದ ಪೋಲೀಸ್‌ನವರ ಇಂಟಲ್

ಜನ್ಸ್ಯೆ ಬಗ್ಗೆ ನಾವು ಪ್ರಶ್ನೆ ಮಾಡಬೇಕಾಗಿದೆ. ರಾತ್ರಿವೇಳೆ ಕೋರಮಂಗಲದಲ್ಲಿ ನೈಟ್ ಪೆಟ್ರೋಲಿಂಗ್ ನಡೆಯುತ್ತಿದ್ದರೂ ಈ ದರೋಡೆ ನಡೆದಿದೆ. ಈ ರೀತಿ ಇರುವಾಗ ನಾವು ಪೋಲೀಸ್ ಕಮಿಶನರ್‌ರವರನ್ನು ಹೇಗೆ ನಂಬುವುದಕ್ಕೆ ಸಾಧ್ಯವಾಗುತ್ತದೆ ? ಬಲಬೀರಸಿಂಗ್ ಮತ್ತು ಕಾಜಕಪೂರ್ ಎಂಬ ಇಬ್ಬರು ದರೋಡೆ ಕಾರರನ್ನು ಪೋಲೀಸಿನವರು ಹಿಡಿದಿದ್ದಾರೆ.

೩–೩೦ ಪಿ.ಎಂ

ಪೋಲೀಸ್ ನಾಯಿಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಪೋಲೀಸ್ ನಾಯಿಗಳಿಂದ ಡಕಾಯಿತರನ್ನು ಹಿಡಿಯುವುದಕ್ಕೆ ಆಗಲಿಲ್ಲ ಅಂದ ಮೇಲೆ ಇವರು ಎಂತಹ ನಾಯಿಗಳನ್ನು ಸಾಕಿರಬಹುದು. ಟ್ಯಾಕ್ಸ್ಸಿ ಪೇಯರ್ಸ್ ಯಾವ ರೀತಿ ಮೋಸ ಮಾಡುತ್ತಿದ್ದಾರೋ ಆ ರೀತಿ ಮೋಸ ಮಾಡುತ್ತಿದ್ದಾರೆ. ಮತ್ತೆ ಫಿಂಗರ್ ಪ್ರಿಂಟ್ ಎಕ್ಸ್‌ಪರ್ಟ್ ಕೂಡ ಹೋಗಿದ್ದಾರೆ, ಅವರು ಇನ್ನೂ ಕೂಡ ಫಿಂಗರ್‌ಪ್ರಿಂಟ್ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಇವರು ಪಿಟಿಕ್ಟೀವ್‌ಸನ್ನು ಕಳಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಇದೆಲ್ಲಾ ಆದಮೇಲೆ ಪೋಲೀಸ್ ಕಮೀಷನರು ತಿರಿಗಿ ಇನ್ನೊಂದು ಸ್ಟೇಟ್‌ಮೆಂಟ್ ಕೊಡುತ್ತಾರೆ. ಏನೆಂದರೆ ಅಲ್ಲಿ ಕತ್ತಲೆ ಜಾಸ್ತಿ ಇದೆ, ಕೆ.ಇ.ಬಿ. ಚೇರ್ಮನ್‌ರನ್ನು ಕರೆದುಕೊಂಡು ಹೋಗಿ ಅಲ್ಲಿ ಲೈಟ್ ಹಾಕಿದರೆ ಡಕಾಯಿತಿ ನಿಲ್ಲಿಸಬಹುದು, ವಾಲೆಂಟರೀಸನ್ನು ಟ್ರೈನ್‌ಮಾಡಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಇದರಲ್ಲಿ ಯಾವುದನ್ನು ನಂಬೋಣ. ಇಷ್ಟಾದರೂ ಡಕಾಯಿತರನ್ನು ಹಿಡಿಯಲಿಲ್ಲ. ಪೋಲೀಸ್ ಕಮೀಷನರ ಸ್ಟೇಟ್‌ಮೆಂಟನ್ನು ನೋಡಿದರೆ ಜನಗಳ ಕಣ್ಣಿಗೆ ಮಣ್ಣು ಎರಚತಕ್ಕಂಥಾ ಬಿಟ್ಟು ಬೇರೆ ಏನೂ ಇಲ್ಲ. ಇವತ್ತಿನ ದಿವಸ ಬೆಂಗಳೂರು ನಗರದ ಪೋಲೀಸರು ಜನರಿಗೆ ರಕ್ಷಣೆ ಕೊಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ನನಗನ್ನಿಸುತ್ತದೆ ಇದಕ್ಕೆ ಕಾರಣವಾದರೂ ಇಷ್ಟೆ. ಇಲ್ಲಿ ಬೆಂಗಳೂರು ನಗರದ ಪೋಲೀಸರು ನಿರ್ವೀರ್ಯರಾಗಿದ್ದಾರೆ, ಅವರಲ್ಲಿ ಈ ಒಂದು ಕಾನೂನನ್ನು ಪರಿಪಾಲನೆ ಮಾಡತಕ್ಕ ಯಾವುದೇ ರೀತಿಯಾವ ಶಕ್ತಿಯೂ ಇಲ್ಲ. ಎಲ್ಲವನ್ನೂ ಕಳೆದು ಕೊಂಡುಬಿಟ್ಟಿದ್ದಾರೆ. ಇದಕ್ಕೆ ಕಾರಣವೇನು ಸ್ವಾಮಿ ?

CHAIRMAN.—You are making a debate. We have to follow the rules.

ಶ್ರೀ ಪಿ. ರಾಮದೇವ್.—ತಾವೇನಾದರೂ ಇದರಲ್ಲಿ ಸಿಕ್ಕಿ ಹಾಕಿಕೊಂಡುಬಿಟ್ಟಿದ್ದರೆ ಇನ್ನೂ ಎರಡು ಗಂಟೆ ಮಾತನಾಡಿ ಎಂದು ಹೇಳುತ್ತಿದ್ದಿರಿ, ತಾವು ಸೇಫಾಗಿ ಇರಬೇಕು. ಡಕಾಯಿತರು ಇನ್ನೂ ಇಲ್ಲೇ ಇದ್ದಾರೆ. ಇವತ್ತು ನಾನು ಇಲ್ಲಿ ಮಾತನಾಡುತ್ತಾ ಇರಬೇಕಾದರೆ ರಾತ್ರಿ ಡಕಾಯಿತಿ ಆಗಬಹುದು. ಪೂಜ್ಯ ಗುಂಡೂರಾಯರಿಗೆ ನಾನು ಕೇಳುತ್ತಾ ಇದ್ದೇನೆ. ಇವತ್ತು ಪೋಲೀಸರು ಮಾನ್ಯ ಗುಂಡೂರಾಯರಿಗೆ ಕೆಟ್ಟ ಹೆಸರು ತರತಕ್ಕ ರೀತಿಯಲ್ಲಿದ್ದಾರೆ, ಒಳ್ಳೆಯ ಹೆಸರನ್ನು ತರುವುದಿಲ್ಲ. ಇಲ್ಲಿ ಎರಡು ಗ್ರೂಪ್ ಇದೆ. One group is loyal to the Constitution and the other group is loyal to Sri Gundu Rao. ಲಾಯಲ್ ಆವರು ಇವರಿಗೆ ಕೆಟ್ಟ ಹೆಸರು ತರತಕ್ಕ ಪ್ರಯತ್ನ ನಡೆಸುತ್ತಿದ್ದಾರೆ. ಭಟ್ ಆವರ ಕೇಸ್‌ನಲ್ಲಿ ಏನಾಯಿತು, ಜಾರ್ಜ್ ಕೇಸ್‌ನಲ್ಲಿ ಏನಾಯಿತು, ಮೊನ್ನೆ ಎ.ಸಿ.ಪಿ. ಆವರು ನಡೆದುಕೊಂಡ ರೀತಿ ಹೇಗಿತ್ತು, ರೇಣುಕಾ ರಾಜೇಂದ್ರನ್ ಕೇಸ್‌ನಲ್ಲಿ ಏನಾಯಿತು ಎನ್ನುವುದನ್ನು ನೋಡಿ. ಇದು ಮಾನ್ಯ ಗುಂಡೂರಾಯರಿಗೆ ಕೆಟ್ಟ ಹೆಸರು ತರತಕ್ಕಂಥಾದ್ದು. ಯಾರು ಕಾನೂನು ಬದ್ಧವಾಗಿ ಕೆಲಸ ಮಾಡುತ್ತಾರೆ ಅವರಿಗೆ ಬೆಂಗಳೂರು ನಗರದಲ್ಲಿ ಸ್ಥಾನವಿಲ್ಲ. ತಮಗೆ ಸೆಲ್ಯೂಟ್ ಹೊಡೆದುಕೊಂಡು, ತಮ್ಮ ಸುತ್ತಮುತ್ತ ಇರುವವರು ಇವತ್ತಿನ ದಿವಸ ಬೆಂಗಳೂರು ನಗರ ಪೋಲೀಸರನ್ನು ಕಂಟ್ರೋಲ್ ಮಾಡಿ ಹಾಳುಮಾಡುತ್ತಿರುವುದರಿಂದ ಬೆಂಗಳೂರು ನಗರನ ಜನಗಳಿಗೆ ಏನೇನೂ ರಕ್ಷಣೆ ಇಲ್ಲ. ಬೆಂಗಳೂರು ನಗರದ ಪೋಲೀಸರಲ್ಲಿ ಎರಡು ಗುಣಗಳಿವೆ. ಒಂದು ದಕ್ಷಿಣೆ ಕೊಡುವುದು, ಎರಡು ಪ್ರದಕ್ಷಿಣೆ ಮಾಡುವುದು. ಇವತ್ತು ಬೆಂಗಳೂರು ನಗರದಲ್ಲಿ ಕೆಲವು ಆಫೀಸರ್ಸ್ ೩ ವರ್ಷಗಳಿಗಿಂತ ಮೇಲೆ ಇರತಕ್ಕವರು ಶೇಕಡ ೯೦ನಷ್ಟು ಇದ್ದಾರೆ. ಬೇಕಾದರೆ ಷಾಪ್ಸ್‌ನಿಂದ ತನಿಖೆ ಮಾಡಲಿ, ಒಬ್ಬ ಅಧಿಕಾರಿಗೆ ಒಂದು ತಿಂಗಳಿಗೆ ೩೦ ಸಾವಿರ ರೂಪಾಯಿ ಆದಾಯವಿದೆ. ಆದ್ದರಿಂದ ಅವರು ದಕ್ಷಿಣೆ ಕೊಡುವುದು, ಇನ್‌ಫ್ಲುಯನ್ಸ್ ಮಾಡಿಸುವುದು, ಇಲ್ಲೇ ಇರುವುದು, ಈ ರೀತಿ ಮಾಡುತ್ತಿದ್ದಾರೆ. ಹೀಗಾಗಿ ಬೆಂಗಳೂರು ನಗರದ ನಾಗರಿಕರಿಗೆ ಇವರಿಂದ ರಕ್ಷಣೆ ಸಿಗುತ್ತಾ ಇಲ್ಲ. ಆದುದರಿಂದ ಏನಾದರೂ ಮಾಡಿ ಇವರನ್ನು ಟ್ರಾನ್ಸ್‌ಫರ್ ಮಾಡಿ.

ಕಿರಣ್ ಬೇಡಿ ಡೆಲ್ಲಿಯಲ್ಲಿ ಯಾವ ರೀತಿ ಕಂಟ್ರೋಲ್ ಮಾಡುತ್ತಾ ಇದ್ದಾರೆ ನೋಡಿ. ಇಷ್ಟಾದರೂ ಮಾನ್ಯ ಗುಂಡೂರಾಯರು ಅವರಿಗೆ ಪದಕಗಳನ್ನು ಕೊಟ್ಟು ಕಂಟ್ರೋಲ್ ಮಾಡಲಿಕ್ಕೆ ಆಗಲಿಲ್ಲ. ಇವತ್ತಿನ ದಿವಸ ಯಾವ ರೀತಿ ಪೋಲೀಸರು ಇದ್ದಾರೆಂದು ತಮಗೆ ಗೊತ್ತಿದೆಯೇ. ಇವರಲ್ಲಿ ಎರಡು ಶಿಫ್ಟ್ ಇದೆ. ಈ ಆಫೀಸರ್ಸ್‌ನಲ್ಲಿ ಎರಡು ಶಿಫ್ಟ್ ಇರುವುದರಿಂದ ಇವೆಲ್ಲಾ ಫೇಲ್ಯೂರ್ ಆಗಿದೆ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿರತಕ್ಕ ಅನೇಕ ಪೋಲೀಸ್ ಅಧಿಕಾರಿಗಳು ಅಪರಾಧಗಳನ್ನು ಹೆಚ್ಚು ಮಾಡುತ್ತಾ ಇದ್ದಾರೆ, ಮಟ್ಕಾ ಪ್ರೊಮೋಕ್ ಮಾಡುತ್ತಾರೆ, ಪ್ರಾಸ್ಟಿಟೂಸ್ಟ್ ಕೇಸ್‌ನಲ್ಲಿ ನಾನು ಅವರ ಗಮನಕ್ಕೆ ತಂದಿದ್ದೇನೆ, ಅವರು ರೈಡ್ ಮಾಡಿದರು, ಆಮೇಲೆ ಅವರೇ ಸ್ವಾಧ್ಯಾಯ ಮಾಡಿ ಬಂದು ಬಿಟ್ಟರು, ಅದು ಸುಬ್ರಹ್ಮಣ್ಯನಗರದಲ್ಲಿ ಆಯಿತು. ಆಯಮ್ಮನನ್ನು ಹಿಡಿದು ಸದಾರಮೆ ನಾಟಕ ಆಡಿದರು ಟೌನ್‌ಹಾಲ್‌ನಲ್ಲಿ. ನಾಟಕ ಆಡಿ ಬಂದ ದುಡ್ಡನ್ನು ಹಂಚಿಕೊಂಡರು. ಆಕೆಯನ್ನು ಕರೆದುಕೊಂಡು ಬಾರ್‌ಗೆ ಹೋಗುತ್ತಾರೆ. ನಿಮ್ಮ ಅನೇಕ ಪೋಲೀಸ್ ಅಧಿಕಾರಿಗಳು ಇವತ್ತಿನ ದಿವಸ ಯಾವ ಬಾರ್‌ನಲ್ಲಿರುತ್ತಾರೆ, ಯಾವ ಮಟ್ಕಾದಲ್ಲಿರುತ್ತಾರೆ, ಎಲ್ಲಿ ಗ್ಯಾಂಬ್ಲಿಂಗ್ ಮಾಡುತ್ತಾರೆ ಎನ್ನುವುದನ್ನು ನಾನು ತೋರಿಸುತ್ತೇನೆ, ನಾನು ಉತ್ಪ್ರೇಕ್ಷೆಮಾಡಿ ಹೇಳುತ್ತಾ ಇಲ್ಲ, ನೀವು ಬೇರೆ ಯಾರನ್ನಾದರೂ ಕಳಿಸಿ ನೋಡಿ. ಲಾ ಅಂಡ್ ಆರ್ಡರ್ ಬಗ್ಗೆ, ಕ್ರೈಮ್ ಕಂಟ್ರೋಲ್ ಮಾಡುವ ಬಗ್ಗೆ, ಮರ್ಡರ್ ಕಂಟ್ರೋಲ್ ಮಾಡುವ ಬಗ್ಗೆ, ಗ್ಯಾಂಬ್ಲಿಂಗ್ ಕಂಟ್ರೋಲ್ ಮಾಡುವ ಬಗ್ಗೆ, ಡಕಾಯಿತಿ ಕಂಟ್ರೋಲ್ ಮಾಡುವ ಬಗ್ಗೆ ಪೋಲೀಸರಿಗೆ ಏನೇನೂ ಆಸಕ್ತಿ ಇಲ್ಲ. ನಾವು ಹೇಳಿ ಹೇಳಿ ಸತ್ತು ಸುಣ್ಣವಾಗಿಬಿಟ್ಟಿದ್ದೇವೆ. ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ನಿಮಗೆ ಏನಾದರೂ ನಮ್ಮ ಬಗ್ಗೆ ಕನಿಕರ, ಕರುಣೆ ಇದ್ದರೆ ದಯವಿಟ್ಟು ಬೆಂಗಳೂರು ನಗರದ ಪೋಲೀಸರನ್ನು ಚೇಂಜ್‌ಮಾಡಬೇಕು. ಇವರೆಲ್ಲಾ ಸಾಕಷ್ಟು ಆಸ್ತಿಪಾಸ್ತಿ ಮಾಡಿದ್ದಾರೆ, ಇನ್ನಷ್ಟು ಮಾಡಬೇಕು ಎಂದು ಇದ್ದಾರೆ, ಆದ್ದರಿಂದ ಇವರೆಲ್ಲಾ ಹೊರಗಡೆ ಹೋಗಲಿ, ಇವರು ೧೦-೨೦ ವರ್ಷಗಳಿಂದ ಇದ್ದಾರೆ. ಇವರು ಹಿಂದಿನ ಆಡಳಿತದಲ್ಲೂ ಇದ್ದರು, ಇವರಿಂದ ನಮಗೆ ಏನೂ ರಕ್ಷಣೆ ಸಿಕ್ಕುವುದಿಲ್ಲ. ಇವತ್ತಿನ ದಿವಸ ಪೋಲೀಸ್ ಸ್ಟೇಷನ್‌ಗಳನ್ನು ಕ್ರೈಂ ಸೆಂಟರ್ಸ್ ಮಾಡಿಕೊಂಡು ತಮಗೆ ಅನುಕೂಲ ಮಾಡಿಕೊಂಡಿದ್ದಾರೆ. ಆದುದರಿಂದ ದಯವಿಟ್ಟು ೩ ವರ್ಷಗಳಿಗಿಂತ ಹೆಚ್ಚು ಕಾಲ ಇರತಕ್ಕವರೆಲ್ಲರನ್ನೂ ಹೊರಗಡೆ ಕಳಿಸಿಬಿಡಿ. ಎರಡನೆಯದು, ಡಕಾಯಿತರನ್ನು ಹಿಡಿಯುವುದಕ್ಕೆ ಈ ಪೋಲೀಸರಿಂದ ಆಗುವುದಿಲ್ಲ. ಅದಕ್ಕೆ ಒಂದು ಸ್ಪೆಷಲ್ ಪೋರ್ಸ್ ಮಾಡಿ, ಅವರಿಗೆ ವಹಿಸಿ. ಏಕೆಂದರೆ, ಇವರೇ ಅವರಲ್ಲಿ ಸೇರಿಕೊಂಡಿರಬೇಕಾದರೆ ಯಾರನ್ನು ಹಿಡಿಯುತ್ತಾರೆ. ಎಲ್ಲಾ ಕ್ರೈಮ್ಸ್ ತೆಗೆದುಕೊಳ್ಳಿ, ಇಲ್ಲಸಿಟ್ ಟ್ರಾಜಡಿನಲ್ಲಿ ಇವರು ಪಾಲುದಾರರಾಗಿದ್ದಾರೆ. ಮೂರನೆಯದಾಗಿ ನಾನು ತಮ್ಮನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ. ತಾವು ಹೋಂ ಡಿಪಾರ್ಟ್‌ಮೆಂಟ್ ಕಡೆಗೆ ಹೆಚ್ಚಿನ ಗಮನ ಕೊಡಬೇಕು, ಏಕೆಂದರೆ ತಮಗೆ ನೂರಾರು ಕೆಲಸಗಳು ಇರುತ್ತವೆ. ಬಹಳ ಜನ ಬರುತ್ತಾರೆ, ಮಾತನಾಡುತ್ತಾರೆ, ಪಾರ್ಟಿ ಆಫೇರ್ಸ್ ಇರುತ್ತದೆ, ಡೆಲ್ಲಿಗೆ ಹೋಗಬೇಕಾಗುತ್ತದೆ, ಹೀಗೆ ತಮಗೆ ವಿಪರೀತ ಕೆಲಸ ಇರುತ್ತದೆ. ಹೀಗಾಗಿ ಇವತ್ತು ಹೋಂ ಡಿಪಾರ್ಟ್‌ಮೆಂಟ್ ನೆಗ್ಲೆಟ್ ಆಗಿರತಕ್ಕಂಥಾದ್ದು.

ಶ್ರೀ ಬಿ. ಸುಬ್ಬಯ್ಯ.—ನನಗೆ ಒಂದು ಸಂಶಯ ಬಂದಿದೆ, ಮಾನ್ಯ ರಾಮದೇವ್ ಅವರು ಯಾವುದರ ಬಗ್ಗೆ ಮಾತನಾಡುತ್ತಿದ್ದಾರೆಂದು. ಹೋಂ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುತ್ತಿದ್ದಾರೋ ಅಥವಾ ೩೧೨ನೇ ನಿಯಮದ ಕೆಳಗೆ ಮಾತನಾಡುತ್ತಿದ್ದಾರೋ ಎಂದು ಸಂಶಯ ಬಂದಿದೆ. ಎರಡನೆಯದಾಗಿ, ಇಲ್ಲಿಯ ಪೋಲೀಸ್ ಅಧಿಕಾರಿಗಳ ಮೇಲೆ ಬಹಳವಾಗಿ ಹೇಳುತ್ತಿದ್ದಾರೆ. ಅವರು ನಮ್ಮ ಈ ಸಭೆಯಲ್ಲಿ ಇಲ್ಲ. ಆದ್ದರಿಂದ ಅವರು ಬಹಳ ಹಣ ಮಾಡಿದ್ದಾರೆ. ಹಾಗೆ ಮಾಡಿದ್ದಾರೆ, ಹೀಗೆ ಮಾಡಿದ್ದಾರೆ ಎಂದು ಈ ಮನೆಯಲ್ಲಿ ಹೇಳುವುದು ಸಮಂಜಸವೇ. ತಾವು ಇದಕ್ಕೆ ರೂಲಿಂಗ್ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

CHAIRMAN.—He has raised this issue under 312. He is permitted to make a short, brief statement about dacoities in the City.

SRI B. SUBBAIAH SHETTY.—He must be very brief.

ಶ್ರೀ ಪಿ. ರಾಮದೇವ್.—ಮಾನ್ಯ ಸಭಾಧ್ಯಕ್ಷರೆ, ನಾನು ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡಿದರೆ ಅವರಿಗೆ ಏಕೆ ಮೆಣಸಿನಕಾಯಿ ಇಟ್ಟುಕೊಂಡ ಹಾಗೆ ಆಯಿತೊ ಗೊತ್ತಿಲ್ಲ. ಏಕೆಂದರೆ

ಅವರು ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿದ್ದರು, ಅವರು ಪೋಲೀಸ್ ಕಾನ್‌ಸ್ಟೇಬಲ್ ಆಗಿದ್ದರು, ಪೋಲೀಸ್ ಇನ್ಸ್‌ಪೆಕ್ಟರ್ ಆಗಿದ್ದರು.

ಶ್ರೀ ಬಿ. ಸುಬ್ಬಯ್ಯಶೆಟ್ಟಿ —ಪೋಲೀಸ್ ಕಾನ್‌ಸ್ಟೇಬಲ್ ಆಗಿರುವುದು ಚಿಕ್ಕ ಸಂಗತಿ ಎಂದು ನಾನು ಹೇಳಲಿಲ್ಲ ನಾನು ಪೋಲೀಸ್ ಕಾನ್‌ಸ್ಟೇಬಲ್ ಆಗಿರಲಿಲ್ಲ. ತಾವು ಹಾಗೆ ನನ್ನನ್ನು ಹೇಳಿದರೂ ನಾನು ಹೀನಾಮಾನವಾಗಿ ಅದನ್ನು ತೆಗೆದುಕೊಳ್ಳುವುದಿಲ್ಲ ತಮ್ಮ ಹಾಗೆ ಇರುವುದಕ್ಕಿಂತ ಪೋಲೀಸ್ ಕಾನ್‌ಸ್ಟೇಬಲ್ ನಿಜವಾಗಿ ಒಳ್ಳೆಯ ಕೆಲಸ ಮಾಡುತ್ತಾನೆಂದು ನಾನು ಹೇಳಬಯಸುತ್ತೇನೆ. ತಾವು ಅದನ್ನು ಹೇಳುವ ಅಗತ್ಯವಿಲ್ಲ. ವೈಯಕ್ತಿಕವಾಗಿ ಹೋಗುವ ಬದಲು ರೂಲ್ಸ್ ಪ್ರಕಾರ ಮಾತ ನಾಡುತ್ತಿದ್ದಾರೋ ಎನ್ನುವ ಪ್ರಶ್ನೆಯನ್ನು ಮಾನ್ಯ ಅಧ್ಯಕ್ಷರಲ್ಲಿ ಸಬ್ಮಿಟ್ ಮಾಡುತ್ತಿದ್ದೇನೆಯೇ ಹೊರತು ಬೇರೆ ವಿಚಾರ ಇಲ್ಲ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸದಸ್ಯರು ವೈಯಕ್ತಿಕವಾಗಿ ಟೀಕೆ ಮಾಡಿದ್ದಾರೆ, ಅದು ರಿಕಾರ್ಡ್‌ಗೆ ಹೋಗಿದೆ, ಅದನ್ನು ತೆಗೆಸಬೇಕು.

ಶ್ರೀ ಪಿ. ರಾಮದೇವ್.—ನಿಮ್ಮ ಮನೆಯಲ್ಲಿ ಡಕಾಯಿತಿ ಆಗಿದ್ದರೆ ಆ ವ್ಯಥೆ ನಿಮಗೆ ಗೊತ್ತಾಗು ತ್ತಿತ್ತು. ಅವರ ಮನಸ್ಸಿಗೆ ನೋವಾಗಿದ್ದರೆ ನಾನು ಕ್ಷಮೆ ಕೋರುತ್ತೇನೆ

ಶ್ರೀ ವೈ. ರಾಮಕೃಷ್ಣ.—ಅದು ರಿಕಾರ್ಡ್‌ಗೆ ಹೋಗಿದೆ. ತೆಗೆಸಬೇಕು.

ಶ್ರೀ ಪಿ. ರಾಮದೇವ್.—ಅವರ ಬಗ್ಗೆ ನನಗೆ ಗೌರವ ಇದೆ. ಅವರು ನಮ್ಮ ಕಾನ್‌ಸ್ಟಿಟ್ಯೂಯೆನ್ಸಿ ಯಲ್ಲೇ ವಾಸವಾಗಿದ್ದಾರೆ. ನಾನು ಹೇಳುತ್ತಿರುವುದೇನೆಂದರೆ, ನಮಗೆ ರಕ್ಷಣೆ ಸಿಗಬೇಕು ಎಂದು. ಆದ್ದರಿಂದ ದಯವಿಟ್ಟು ಈ ಪೋಲೀಸರನ್ನು ಬದಲಾವಣೆ ಮಾಡಬೇಕು, ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು, ನಾಗರೀಕರಿಗೆ ರಕ್ಷಣೆ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು) —ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸದಸ್ಯರಾದ ಶ್ರೀಮಾನ್ ರಾಮ್‌ದೇವ್‌ರವರು ೩೧೨ ರೀತಿಯ ಪ್ರಕಾರ ಬೆಂಗಳೂರು ನಗರದಲ್ಲಿ ನಡೆದಂಥ ಡಕಾಯಿತಿ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅವರು ಡಕಾಯಿತಿ ಬಗ್ಗೆ ಹೇಳುವಾಗ ಅನೇಕ ವಿಚಾರ ಗಳನ್ನು ಮಾನ್ಯ ಶ್ರೀ ಸುಬ್ಬಯ್ಯಶೆಟ್ಟಿಯವರು ಹೇಳಿದ ಹಾಗೆ ಪೋಲೀಸ್ ಇಲಾಖೆಯ ಮೇಲೆ ಮಾತನಾಡಿದ ಹಾಗೆ ಮಾತನಾಡಿದ್ದಾರೆ. ಈ ಡಕಾ ಯಿತಿ ನಡೆಯುವಂಥಾದ್ದು ಒಳ್ಳೆಯದು ಅಥವಾ ಅದು ನಡೆಯಬೇಕೆಂದು ಹೇಳುವಂಥಾ ಉದ್ದೇಶ ಯಾವ ನಾಗರೀಕ ಸಮಾಜದಲ್ಲಿಯೂ ಇರುವುದಿಲ್ಲ. ಯಾವುದೇ ಸರ್ಕಾರವಾದರೂ ಸಹ ಇಂಥಾ ವಿಷಯಗಳನ್ನು ಖಂಡಿಚ್ಚಿಡಬೇಕು ಎನ್ನುತಕ್ಕ ಉದ್ದೇಶವನ್ನು ಹೊಂದಿರುವುದಿಲ್ಲ. ಆದರೆ ಒಂದು ವಿಷಯವನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ಇಂಥಾ ಸಂದರ್ಭದಲ್ಲಿ ಸಮ್ಮನೇ ಪೋಲಿಸಿನವರನ್ನು ವರ್ಗಾ ಮಾಡಿ ಎಂದು ದೂರುವುದು ಬೇಡ. ಇದೇ ರೀತಿಯ ದರೋಡೆಗಳು ಬೊಂಬಾಯಿ, ಡೆಲ್ಲಿಯಲ್ಲಿ ಸಹ ನಡೆದಿದೆ. ನಮ್ಮ ಇಡೀ ರಾಷ್ಟ್ರದಲ್ಲಿಯೇ ಕರ್ನಾಟಕದ ಪೋಲೀಸ್ ಒಳ್ಳೆಯ ಪ್ರಶಂಸೆಯನ್ನು ಪಡೆದಿದೆ ಈಗ ಏನೋ ಒಂದು ದುರ್ಘಟನೆ ನಡೆದು ಹೋಗಿದೆ ಇದನ್ನು ಯಾವ ರೀತಿಯಾಗಿ ಪತ್ತೆ ಮಾಡಬೇಕು, ಇದರ ಬಗ್ಗೆ ಸರ್ಕಾರಕ್ಕೆ ಯಾವ ರೀತಿಯಾಗಿ ಸಹಕಾರ ನೀಡ ಬಹುದು ಎನ್ನುವುದನ್ನು ಹೇಳುವುದು ಬಿಟ್ಟು, ಪೋಲೀಸ್ ಇಲಾಖೆಯಲ್ಲಿ ಎರಡು ಗುಂಪುಗಳಿವೆ. ೩ ಗುಂಪುಗಳಿವೆ, ಎಂದು ಹೇಳಿದರು ನನಗೆ ಗೊತ್ತಿರುವ ಹಾಗೆ ಎಷ್ಟು ಗುಂಪು ಗಳಿವೆಯೋ ಒಂದೂ ನನಗೆ ಗೊತ್ತಿಲ್ಲ. ಅದು ಸಂಬಂಧವಿಲ್ಲದೇ ಇರತಕ್ಕಂಥ ಪ್ರಶ್ನೆ ನಮಗೆ ಇರತಕ್ಕಂಥ ಆಸಕ್ತಿ ಏನೆಂದರೆ ಯಾವ ತರಹದಲ್ಲಿ ಅವರು ಅಲ್ಲಿ ನಡೆಸಿದ್ದಾರೆ, ಅದನ್ನು ಪತ್ತೆ ಹಚ್ಚುವುದಕ್ಕೆ ಯಾವ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದಾರೆ, ಅದಕ್ಕೆ ಜನತೆ ಯಾವ ರೀತಿಯಾಗಿ ಸಹಕಾರ ನೀಡಬೇಕು ಎನ್ನುವುದು ಮುಖ್ಯ. ಆದುದರಿಂದ ಇದು ಒಂದು ಸರ್ಕಾರಕ್ಕೆ ಪ್ರತಿಷ್ಠೆಯ ಪ್ರಶ್ನೆಯಾಗಿದೆಯೆಂದು ತಿಳಿದು ಕೊಂಡಿಲ್ಲ, ಆ ರೀತಿಯಾಗಿ ತಿಳಿದುಕೊಂಡಿದ್ದರೆ, ಅದು ಮಹಾಪರಾಧವಾಗುತ್ತದೆ. ನಗರದ ದೂರದ ಭಾಗದಲ್ಲಿ ಒಂಟಿ ಮನೆ ಇದೆ. ಅಂಥಾ ಜಾಗದಲ್ಲಿ ಈ ರೀತಿಯ ಘಟನೆ ನಡೆದು ಹೋಗಿದೆ. ೪ ಜನ ಚಾಕು, ಚೂರಿ ತೋರಿಸಿ ದುಡ್ಡನ್ನು ದೋಚಿಕೊಂಡು ಹೋಗಿದ್ದಾರೆ ಅದು ಒರ್ವ ನಾಲ್ಕೇ ಜನ ಸೇರಿ ಮಾಡಿದ್ದರೆ ಡಕಾಯಿತಿ ಆಗುತ್ತಿರಲಿಲ್ಲ. ೪ ಜನಕ್ಕೆ ಮೇಲ್ಪಟ್ಟು ೫–೬ ಜನ ಹೋಗಿರುವುದರಿಂದ ಡಕಾಯಿತಿ ಆಗಿದೆ ಇಲ್ಲದಿದ್ದರೆ ಅದು ಕಳ್ಳತನವಾಗುತ್ತಿತ್ತು. ಇದು ಕಾನೂನು ಪ್ರಕಾರ ಅಧ್ಯಕ್ಷರೇ, ೪–೫ ಜನಕ್ಕೆ ಮೇಲ್ಪಟ್ಟು ಇದ್ದರೆ ಅದು ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಡಕಾಯಿತಿ

ಆಗುತ್ತದೆ. ೩ ಜನ ಸೇರಿಕೊಂಡು ಮಾಡಿದ್ದರೆ ಕಳ್ಳತನವಾಗುತ್ತದೆ. ಆದುದರಿಂದ ಇವತ್ತು ಪೋಲೀಸ್ ಇಲಾಖೆಯನ್ನು ಟೀಕೆ ಮಾಡುವುದರಿಂದ, ಅಧಿಕಾರಿಗಳನ್ನು ಟೀಕೆ ಮಾಡುವುದರಿಂದ ಕಳ್ಳತನ ನಿಲ್ಲುತ್ತದೆಂದು ಹೇಳುವುದಾದರೆ ಅದು ಸರಿಯಾದುದಲ್ಲ ನಾವು ಇವತ್ತು ಅವರನ್ನು ಹಿಡಿಯುವುದ ಕೋಸ್ಕರವಾಗಿಯೇ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಆದಕ್ಕೆ ತಮ್ಮಲ್ಲಿ ಏನಾದರೂ ಸಲಹೆಗಳು ಇದ್ದರೆ ಕೊಡಿ. ನೀವು ಸಲಹೆ ಕೊಟ್ಟಿದ್ದೀರಿ, ಅದು ಏನೆಂದರೆ ಬೇರೆಯವರನ್ನು ಅಲ್ಲಿಗೆ ವರ್ಗ ಮಾಡಿ ಎಂದು, ಆ ರೀತಿ ಮಾಡಿದರೂ ಸಹ ಅದು ಮಾತಿಗೆ ಹೇಳಿಕೊಳ್ಳಬಹುದೇ ಹೊರತು ಮತ್ತೆ ಏನೂ ಆಗುವುದಿಲ್ಲ. ಪೋಲೀಸ್ ಇಲಾಖೆಯಲ್ಲೂ ಒಂದು ನಿಯಮವಿದೆ. ಎಷ್ಟು ಜನ ಹೊಸಬರು ಇರಬೇಕು, ಎಷ್ಟು ಜನ ಹಳಬರು ಇರಬೇಕು ಎನ್ನುವ ಬಗ್ಗೆ ನಿಯಮವಿದೆ, ಎಷ್ಟು ಜನ ಹಳಬರು ಸಬ್ ಇನ್ಸ್‌ಪೆಕ್ಟರ್‌ಗಳು ಇರಬೇಕು, ಎಷ್ಟು ಜನ ಹೊಸಬರು ಇನ್ಸ್‌ಪೆಕ್ಟರ್‌ಗಳು ಇರಬೇಕು ಎನ್ನುವ ಬಗ್ಗೆ ಕಾನೂನು ಇದೆ. ಇಲ್ಲದಿದ್ದರೆ ಎಲ್ಲರನ್ನೂ ಒಂದೇ ಸಾರಿ ಹೊರಗಡೆ ವರ್ಗ ಮಾಡಿ ಬಿಟ್ಟರೆ, ಹೊಸಬರು ಅಲ್ಲಿಗೆ ಬಂದವರು ಅಲ್ಲಿ ಯಾರು ಯಾರಿದ್ದಾರೆ ಎಂದು ತಿಳಿದುಕೊಳ್ಳುವುದಕ್ಕೇ ಒಂದೆರಡು ವರ್ಷಗಳು ಬೇಕಾಗುತ್ತದೆ. ಆದುದರಿಂದ ಇವತ್ತು ನೀವು ಅನೇಕ ಸಂದರ್ಭದಲ್ಲಿ ಬರೀ ಟೀಕೆ ಮಾಡುತ್ತಿರುವುದರಿಂದ ಅನೇಕ ರಾಜ್ಯಗಳಲ್ಲಿ ಉಂಟಾಗಿರತಕ್ಕ ಸ್ಥಿತಿಯೇ ನಮ್ಮ ರಾಜ್ಯಕ್ಕೂ ಬರುತ್ತಿದೆ. ಅನೇಕ ಮುಖಂಡರುಗಳೂ ಕೂಡ ಇದೇ ರೀತಿ ಮಾಡುತ್ತಿದ್ದಾರೆ ಅದು ಸರಿಯಾದುದಲ್ಲ. ಎಲ್ಲಿ ನಾವು ಒಳ್ಳೆಯ ಕೆಲಸ ಮಾಡಿದ್ದೇವೆ ಅದನ್ನು ಪ್ರಶಂಸೆ ಮಾಡಿ ಹೇಳಬೇಕಾಗುತ್ತದೆ, ಎಲ್ಲಿ ತಪ್ಪು ಮಾಡಿದ್ದೇವೆ ಅದನ್ನು ತೋರಿಸಿ ಹೇಳಬೇಕಾಗುತ್ತದೆ. ನೀವು ಸಲಹೆಗಳನ್ನು ಕೊಟ್ಟು, ಸಹಕಾರವನ್ನು ನೀಡಬೇಕು ಅದನ್ನು ಬಿಟ್ಟು ಯಾವುದೇ ಸಂದರ್ಭ ಬರಲಿ, ಅವರು ಒಳ್ಳೆಯದು ಮಾಡಿರಲಿ ಇಲ್ಲವೇ ಕೆಟ್ಟದು ಮಾಡಿರಲಿ ಎಲ್ಲದಕ್ಕೂ ಪೋಲೀಸಿನವರನ್ನು ಅಂದೂ ಎಲ್ಲಾ ಕಡೆ ಡಕಾಯಿತಿಗಳು ಜಾಸ್ತಿ ಯಾಗುತ್ತಾ ಬರುತ್ತಿವೆ ಅಲ್ಲಿ ಗುಂಪುಗಳಿವೆ ಎಂದು ಹೇಳಿದಿರಿ. ಯಾವ ಆಫೀಸರ್ ಒಳ್ಳೆಯವರು ಎಂದು ಹೇಳುತ್ತೀರಿ ? ಯಾವ ವ್ಯಕ್ತಿಗೂ ಅವರು ಲಾಯಲ್ ಆಗಿರುವುದಿಲ್ಲ, ನಾಳೆ ದಿವಸ ನೀವು ಮುಖ್ಯ ಮಂತ್ರಿಗಳಾಗಿದ್ದರೆ ಅವರು ನಿಮಗೂ ಸೆಲ್ಯೂಟ್ ಹಾಕುತ್ತಾರೆ. ಅದು ಯಾವುದೇ ವ್ಯಕ್ತಿ ಕಾರಣವಲ್ಲ. ತಮಗೆ ಹೇಳಬೇಕಾ ಎಂದರೆ ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದೆ, ಆನಂತರ ಮಿನಿಸ್ಟರ್ ಶಿಪ್ ಹೋದ ನಂತರ ನನಗೆ ಪೋಲೀಸ್ ಕಾವಲು ಇತ್ತೇ ? ಆದರೆ ಇವತ್ತಿನ ದಿವಸ ಮುಖ್ಯಮಂತ್ರಿಯಾಗಿದ್ದೇನೆ ಇದ್ದಾರೆ.. ಆದೇ ರೀತಿ ಹಿಂದೆ ಮುಖ್ಯಮಂತ್ರಿಗಳವರ ಮನೆಯಲ್ಲಿ ಪೋಲೀಸರು ಕಾವಲು ಇರುತ್ತಿರಲಿಲ್ಲವೇನು ? ನೀವು ಮಂತ್ರಿಯಾಗಿಲ್ಲ ನಿಮಗೆ ಗೊತ್ತಿಲ್ಲ ಏತಕ್ಕೆ ಅದನ್ನೆಲ್ಲಾ ಹೇಳುವುದಕ್ಕೆ ಹೋಗುತ್ತೀರಿ ? ಆದುದರಿಂದ ಇವತ್ತಿನ ದಿವಸ ಅದು ಮುಖ್ಯವಾದ ವಿಷಯವಲ್ಲ. ನಾವು ಅಧಿಕಾರ ದಲ್ಲಿದ್ದಾಗ ಪೋಲೀಸಿನವರು ನಮ್ಮ ಜೊತೆಯಲ್ಲಿರುತ್ತಾರೆ, ನಾಳೆ ದಿವಸ ನೀವು ಅಧಿಕಾರಕ್ಕೆ ಬಂದಾಗ ನಿಮ್ಮ ಕಡೆ ಇದ್ದು ಕೆಲಸ ಮಾಡುತ್ತಾರೆ ಅದರಲ್ಲಿ ಚರ್ಚೆ ಮಾಡತಕ್ಕದ್ದು. ಏನಿದೆ ? ಆದುದರಿಂದ ಇವತ್ತಿನ ದಿವಸ ನಮ್ಮ ಮುಂದಿರತಕ್ಕ ಡಕಾಯಿತಿ ಏನು ನಡೆದಿದೆ ಆದರ ಬಗ್ಗೆ ಸರ್ಕಾರ ಏನು ಕಾರ್ಯ ಕ್ರಮ ಕೈಗೊಂಡಿದೆ, ಏನು ಕ್ರಮಗಳನ್ನು ಎಷ್ಟರಮಟ್ಟಿಗೆ ಕೈಗೊಂಡಿದ್ದಾರೆ ಎನ್ನತಕ್ಕದ್ದು ಮುಖ್ಯ ವಾಗಿದೆ. ನೀವು ಮಾತನಾಡುತ್ತಾ ಪೋಲೀಸ್ ನಾಯಿ ಎಂದು ಹೇಳಿದ್ದೀರಿ. ನಾಯಿಗಳನ್ನು ಸಾಕಲ್ಲ ವೆಂದು ಹೇಳಿದ್ದೀರಿ. ಇವತ್ತು ನಾವು ಇಲ್ಲಿ ಹೆಚ್ಚಿಗೆ ಮೆಜಾರಿಟಿಯಲ್ಲಿರುವುದರಿಂದ ನಾವು ಅಧಿಕಾರ ದಲ್ಲಿರುತ್ತೇವೆ, ನೀವು ಮೆಜಾರಿಟಿಯಲ್ಲಿದ್ದರೆ ನೀವು ಅಧಿಕಾರದಲ್ಲಿರುತ್ತೀರಿ ಆದರೆ ಈ ಪೋಲೀಸ್ ಅಧಿಕಾರಿಗಳೇನಿದ್ದಾರೆ ಅವರು ಯಾವಾಗಲೂ ಇರತಕ್ಕವರೇ, ಈ ಮೆಷನರಿ ಇದ್ದೇ ಇರುತ್ತದೆ. ಆದುದ ರಿಂದ ಇವತ್ತು ಸುಮ್ಮನೇ ಹೇಳುವುದಕ್ಕೋಸ್ಕರವಾಗಿ ಹೇಳಿಬಿಟ್ಟು ಸುಮ್ಮನೇ ಕೂತುಕೊಳ್ಳುವುದ ಕ್ಕಾಗುವುದಿಲ್ಲ. ಇವತ್ತಿನ ಸಂದರ್ಭದಲ್ಲಿ ೧೪ ಜಿಲ್ಲೆಗಳಿಗೆ ಒಬ್ಬರೇ ಒಬ್ಬರು ಕಾನ್ಸ್‌ಸ್ಟಬಲ್ ಇರುವುದು, ಅದನ್ನು ಜಾಸ್ತಿ ಮಾಡಬೇಕು ಎಂದರೆ ಅನೇಕ ಕಾನೂನು ಕಟ್ಟಳೆಗಳು ಅಡ್ಡಿ ಬರುತ್ತದೆ. ಅದಕ್ಕೆ ಪ್ಲಾನಿಂಗ್ ಕಮಿಷನರವರು ಒಪ್ಪಿಕೊಳ್ಳಬೇಕಾಗುತ್ತದೆ, ಇದನ್ನು ಮಾಡುವುದಕ್ಕೆ ಹೋದರೆ ಇರಿಗೇಷನ್ ಕಾರ್ಯ ಮುಖ್ಯವೇ, ಇಲ್ಲ ಸ್ಕೂಲ್ ಬಿಲ್ಡಿಂಗ್‌ಗಳನ್ನು ಕಟ್ಟುವುದು ಮುಖ್ಯವೇ, ಇಲ್ಲ ಆರೋಗ್ಯ ಇಲಾಖೆಯ ಕಾರ್ಯಗಳು ಮುಖ್ಯವೇ ಎನ್ನತಕ್ಕ ಪ್ರಶ್ನೆ ಬರುತ್ತದೆ. ಆದುದರಿಂದ ಇದನ್ನೆಲ್ಲಾ ನಾವು ಗಮನಕ್ಕೆ ತೆಗೆದುಕೊಂಡರೆ ಅದನ್ನು ಹೆಚ್ಚಿಗೆ ಮಾಡುವುದಕ್ಕೆ ಹಣಕಾಸಿನ ಅಡಚಣೆ ಬರುತ್ತದೆ. ಆದುದರಿಂದ ಇಂಥಾ ಒಂದು ಮೂಲಭೂತವಾದ ಪ್ರಶ್ನೆಗಳನ್ನು ವಿಚಾರ ಮಾಡದೇ ಯಾರೋ ಒಬ್ಬ ಆಫೀಸರ್‌ನ್ನು ಟ್ರಾನ್ಸ್‌ಫರ್ ಮಾಡಿ ಅಂತ ಹೇಳಿದರೆ, ನಾಳೆ ದಿವಸ ಇನ್ನೊಬ್ಬರು ಬಂದಾಗ ಇನ್ನು ಳ ಕಳ್ಳತನವಾಯಿತು ಎಂದರೆ ಅವರನ್ನು ಟ್ರಾನ್ಸ್‌ಫರ್ ಮಾಡಿ ಎಂದು ಹೇಳುತ್ತೀರಿ. ಆದುದರಿಂದ

ತಾವು ಸರಿಯಾದ ಮಾರ್ಗದರ್ಶನವನ್ನು ಮಾಡುವುದು ಬಿಟ್ಟು ಟೀಕೆ ಮಾಡಿದರೆ ಆ ಟೀಕೆಗೆ ಉತ್ತರ ಕೊಟ್ಟು ಹೋಗುತ್ತೇವೆ. ಆದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಆದರ ಬದಲು ಏನು ಮಾಡ ಬೇಕು ಎಂದರೆ ನಾವು ನೀವು ಕೂತುಕೊಂಡು ಯೋಚನೆ ಮಾಡೋಣ, ಯೋಚನೆ ಮಾಡಿ ಇದರ ಬಗ್ಗೆ ಸರ್ವ ಪ್ರಯತ್ನ ಮಾಡಿ ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡೋಣ. ಪೋಲೀಸ್ ಇಲಾಖೆಯವರು ಸಹ ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಅವರೂ ಸಹ ರಾತ್ರಿ ಹಗಲು ದುಡಿಯುತ್ತಿದ್ದಾರೆ. ಆದಕ್ಕೋಸ್ಕರವಾಗಿಯೇ ಸ್ಪೆಷಲ್ ಸ್ಕ್ವಾಡ್‌ಗಳನ್ನು ಹಾಕಿಕೊಂಡು ರಾತ್ರಿ ಹಗಲು ಕೆಲಸ ಮಾಡುತ್ತಿದ್ದಾರೆ ೪–೫ ಜನ ಯಾರೋ ಹಿಂದಿಯಲ್ಲಿ ಮಾತನಾಡುತ್ತಿದ್ದವರು ಡಕಾಯಿತಿ ನಡೆಸಿದ್ದಾರೆ ಎನ್ನುವ ಬಗ್ಗೆ ಪೋಲೀಸಿನವರು ಪತ್ತೆ ಹಚ್ಚುವಾಗ ಹಿಂದಿಯಲ್ಲಿ ಮಾತನಾಡುತ್ತಿದ್ದ ಕೆಲವರನ್ನು ಹಿಡಿದು ವಿಚಾರ ಮಾಡಿದ ಕಾಲಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು ಅದಕ್ಕೂ ಟೀಕೆಗಳು ಬಂದಿವೆ ಇವನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇದು ಕೇವಲ ನಮ್ಮ ಪಕ್ಷದ ಪ್ರತಿಷ್ಠೆಯ ಪ್ರಶ್ನೆಯಲ್ಲ. ನಾಗರಿಕರಿಗೆ ಎಲ್ಲ ರೀತಿಯ ರಕ್ಷಣೆ ಕೊಡಬೇಕಾಗಿರುವುದರಿಂದ ಸರ್ಕಾರಕ್ಕೆ ಎಷ್ಟು ಜವಾಬ್ದಾರಿ ಇದೆಯೋ ಆಷ್ಟೇ ಜವಾಬ್ದಾರಿ ಸಮಾಜದ್ದು ಎಲ್ಲರದೂ ಇದೆ. ಮೊನ್ನೆ ದಿವಸ ಡೆಲ್ಲಿಯಲ್ಲಿ ೧೨ ಗಂಟೆ ಮಧ್ಯಾಹ್ನದ ಹೊತ್ತಿನಲ್ಲಿಯೇ ೭ ಜನಹೋಗಿ ಬ್ಯಾಂಕಿನಿಂದ ೧೦ ಲಕ್ಷಕ್ಕೂ ಮೇಲ್ಪಟ್ಟು ಲೂಟಿ ಮಾಡಿದ್ದಾರೆ. ಅವರನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಆದರೆ ಇನ್ನೂ ಸಿಕ್ಕಿಲ್ಲ ೫೦–೬೦ ಜನ ಕೆಲಸ ಮಾಡುತ್ತಿರುವಾಗ ಒಬ್ಬಿಬ್ಬರು ಸ್ವಲ್ಪ ನಿರ್ಲಕ್ಷ್ಯದಿಂದ ಕೆಲಸ ಮಾಡಿರಬಹುದು, ಅದಕ್ಕೆ ನೀವು ಎಲ್ಲರನ್ನೂ ಟೀಕೆ ಮಾಡಿದರೆ ರಾತ್ರಿ ಹಗಲೂ ಸುಡಿಯುತ್ತಿರತಕ್ಕವರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.

ಅವರಿಗೂ ತಮ್ಮ ಮನಸ್ಸಿನಲ್ಲಿ, ನಾವು ಏನಾದರೂ ಮಾಡಿ ಪತ್ತೆ ಮಾಡಬೇಕೆಂಬ ಛಲ ಇದೆ. ಉತ್ಸಾಹ ಇದೆ. ಅವರು ಕೂಡ ಸರ್ವ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. ಸರ್ಕಾರದ ಪ್ರಯತ್ನ ಏನು ಎಂಬುದನ್ನು ತಾವು ಯೋಚಿಸುವುದಿಲ್ಲ. ಯಾವುದಕ್ಕೋ, ಯಾರಿಗೋ ಬಡ್ತಿ ಸಿಗಲಿಲ್ಲ, ವರ್ಗವಾಗಿರುತ್ತಾರೆ, ಡಿಸ್‌ಮಿಸ್ ಆಗಿರುತ್ತಾರೆಂದು ಹೇಳುತ್ತೀರಿ. ಅದನ್ನೇ ಕೇಳಿಕೊಂಡು ದೊಡ್ಡವಾಗಿ ಹೇಳುತ್ತಾ ಹೋದರೆ ಅದರಿಂದ ಬಹುಶಃ ಸಮಾಜಕ್ಕೆ ಒಳ್ಳೆಯದು ಮಾಡುತ್ತೇವೆಂದು ನಾನಂತೂ ತಿಳಿದುಕೊಂಡಿಲ್ಲ. ಇವತ್ತಿನ ದಿವಸ ಸರ್ಕಾರ ಎಲ್ಲ ರೀತಿಯ ಪ್ರಯತ್ನ ಮಾಡಿದೆ. ಈಗಾಗಲೇ ಆ ವಿಚಾರದಲ್ಲಿ ನಾನಾ ರೀತಿಯ ಮಾಹಿತಿಗಳು ಬಂದಿವೆ. ಜೊತೆಗೆ ಇನ್ನೂ ಅನೇಕ ಮಾಹಿತಿಗಳನ್ನು ತರಿಸಬೇಕಾಗಿದೆ. ಬೆಂಗಳೂರಿನ ಬ್ಯಾಂಕೊಂದರಲ್ಲಿ ರಿವಲ್ವರ್ ತೋರಿಸಿ ಹಗಲು ದರೋಡೆ ಮಾಡಿದ ವರನ್ನು ನೆಲಮಂಗಲದಲ್ಲಿ ಹಿಡಿಯಬೇಕಾಯಿತು. ಇವತ್ತು ಜನಸಂಖ್ಯೆ ಜಾಸ್ತಿ ಆದಹಾಗೆ ಈ ರೀತಿಯ ಅಪರಾಧಗಳು ಹೊಸ ಹೊಸ ರೂಪದಲ್ಲಿ ಬರುತ್ತಿವೆ. ಪೋಲೀಸರು ಇದ್ದರೂ ಏಕೆ ಹೀಗಾಗುತ್ತದೆಂಬ ಪ್ರಶ್ನೆ ಅಲ್ಲ. ಆಯಾಯ ಸಂದರ್ಭಕ್ಕೆ ತಕ್ಕಂತೆ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದಕ್ಕೆ ಅವರಿಗೆ ಒಂದು ರೀತಿಯ ಉತ್ಸಾಹ ಬೇಕು; ಮತ್ತು ಪ್ರೋತ್ಸಾಹ ಕೊಡಬೇಕಾಗುತ್ತದೆ. ಅವರಿಗೆ ಪ್ರೋತ್ಸಾಹ ನೀಡದಿದ್ದರೆ ಏನು ಪ್ರಯೋಜನವಾಗುವುದಿಲ್ಲ. ನಾಳೆ ದಿವಸ ನೀವು ಹೇಳಬಹುದು, ಆ ಡಕಾಯಿತಿಗಳನ್ನು ಪಿಡಿಯಲಿಲ್ಲವಾದಕಾರಣ ಸರ್ಕಾರ ರಾಜೀನಾಮೆ ಕೊಡಲಿ ಎಂದು; ಆದಕ್ಕೆ ಪ್ರತಿಯಾಗಿ ಪೋಲೀಸ್ ಇಲಾಖೆ ನೋಡುತ್ತಿದೆ ಎಂದು ನಾವು ಹೇಳಬಹುದು. ಆದರೆ ಆದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ೩೦ ವರ್ಷಗಳ ಹಿಂದೆ ಈ ಭಾಷಣವನ್ನು ಒಪ್ಪುತ್ತಿದ್ದೇವು. ಏಕೆಂದರೆ, ಇಂಗ್ಲೀಷ್ ಸರ್ಕಾರವನ್ನು ಓಡಿಸಿದರೆ ಪ್ರಜಾಪ್ರಭುತ್ವದ ಸರ್ಕಾರ ಬರುತ್ತದೆ ಎಂದು ಈಗ ಇರುವುದು ನಮ್ಮ–ನಿಮ್ಮ ಸರ್ಕಾರ. ನಾವು ಜಾಸ್ತಿ ಸಂಖ್ಯೆಯಲ್ಲಿದ್ದರೆ ನಾವು ಆಡಳಿತ ನಡೆಸುತ್ತೇವೆ, ನೀವು ಜಾಸ್ತಿ ಸಂಖ್ಯೆಯಲ್ಲಿದ್ದರೆ ನೀವು ಆಡಳಿತ ನಡೆಸುತ್ತೀರಿ. ಇದರಿಂದ ಆಕಾಶವೇನು ಕಳಚಿ ಬೀಳುವುದಿಲ್ಲ. ಆದ್ದರಿಂದ ಅವರಿಗೆ ಸ್ವಲ್ಪ ಉತ್ತೇಜನ ಕೊಡಿ. ಎಲ್ಲೆಲ್ಲಿ ಸ್ಕ್ವಾಡನ್ನು ಜಾಸ್ತಿ ಮಾಡಬೇಕು, ಎಲ್ಲೆಲ್ಲಿ ನೈಟ್ ಡ್ಯೂಟಿ ಜನರನ್ನು ಜಾಸ್ತಿ ಮಾಡಬೇಕು ಎಲ್ಲವನ್ನು ಮಾಡಬಹುದು. ಇವತ್ತಿನ ದಿವಸ, ಆಲ್ಲಲ್ಲಿ ಗುಡಿಸಲುಗಳನ್ನು ಹಾಕುತ್ತಿದ್ದಾರೆಂಬುದು ಪತ್ರಿಕೆಗಳಲ್ಲಿ ಬರುತ್ತಿದೆ. ಅವನ್ನು ಕೀಳಬೇಡಿ, ಅವರಿಗೆ ರಕ್ಷಣೆ ಕೊಡಿ ಎಂದು ಕೆಲವರು ಅನ್ನುತ್ತೀರಿ; ಮತ್ತೆ ಕೆಲವರು ಅದಕ್ಕೆ ಅವಕಾಶ ಕೊಡಬೇಡಿ ಅನ್ನುತ್ತೀರಿ. ಇದಕ್ಕೆಲ್ಲ ಏನು ಮಾಡುವುದು? ಇದಕ್ಕೆ ಸರ್ಕಾರ ಒಂದು ನಿಲುವು ತೆಗೆದು ಕೊಳ್ಳಬೇಕಾಗುತ್ತದೆ. ಇವತ್ತು ಬೇಕಾದರೆ ಬಹಿರಂಗ ಸಭೆಯನ್ನು ಕರೆದು ಚರ್ಚೆ ಮಾಡಬಹುದು, ಆದರೆ ನಾವು ಯಾವ ಮಾರ್ಗದಲ್ಲಿ ಹೇಗೆ ಹೋಗಬೇಕೆಂಬುದನ್ನು ಮೊದಲು ಆಲೋಚನೆ ಮಾಡಬೇಕು. ಸಮಾಜವನ್ನು

ಹೇಗೆ ಎದುರಿಸಬೇಕೆಂಬುದನ್ನು ಆಲೋಚಿಸಬೇಕು. ಅದನ್ನು ಬಿಟ್ಟು ಏನೋ ಒಂದು ಮಾಡಿದರೆ ಏನು ಪ್ರಯೋಜನ? ಒಂದು ಇಲಾಖೆ ಎಂದರೆ ಅಲ್ಲಿ ನೂರಾರು ಸಮಸ್ಯೆಗಳಿರುತ್ತವೆ. ನಾವು ಆ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆದರ ಬಗ್ಗೆ ನಾವು, ನೀವು ಏಕೆ ಯೋಚನೆ ಮಾಡಬೇಕು? ಹಿಂದೆ ನಾನು ಮಂತ್ರಿಯಾಗಿದ್ದೆ, ನಂತರ ಮಂತ್ರಿತನವನ್ನು ಬಿಟ್ಟಿದ್ದೆ, ಈಗ ಮುಖ್ಯ ಮಂತ್ರಿಯಾಗಿದ್ದೇನೆ ಆದುದರಿಂದ ನಾನು ಏನು ಹೇಳುತ್ತೇನೆಂದರೆ, ಅಪರಾಧ ನಡೆದು ಹೋದ ಮೇಲೆ ಸುಮ್ಮನೆ ಆದರ ಬಗ್ಗೆ ಟೀಕೆ ಮಾಡಿಕೊಂಡು ಹೋಗುವುದರಿಂದ ಏನು ಪ್ರಯೋಜನ ಇಲ್ಲ. ರಚನಾತ್ಮಕ ಸಲಹೆಗಳನ್ನೇ ನಾದರೂ ಕೊಟ್ಟರೆ ಪ್ರಯೋಜನವಾಗುತ್ತದೆ. ಲೋಪ ದೋಷಗಳನ್ನು ಪತ್ತೆ ಹಚ್ಚುವುದಕ್ಕೆ ಏನಾದರೂ ಮಾರ್ಗವನ್ನು ಸೂಚಿಸಿದರೆ ಉಪಯೋಗವಾಗುತ್ತದೆ.

ಶ್ರೀ ಪಿ ರಾಮದೇವ್.—ನಾನು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದೇನೆ. ಬೆಂಗಳೂರು ನಗರದಲ್ಲಿರತಕ್ಕ ಪೋಲೀಸನ್ನು ರೀಫಾರಂ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಆ ರೀತಿ ಸಲಹೆಗಳನ್ನು ಕೊಡಿ. ನನ್ನ ಜೊತೆಯಲ್ಲಿ ಬನ್ನಿ ಎನ್ನುತ್ತೀರಿ. ನಾನು ನಿಮ್ಮ ಜೊತೆಯಲ್ಲಿ ಬಂದು ನೋಡಬೇಕೆ? ಮೊದಲೇ ನಾನು ನೋಡಿದ್ದೇನೆ. ನಾನು ಹೀಗೆ ನೋಡುತ್ತೇನೆಂಬುದು ನಿಮಗೆ ಗೊತ್ತಿಲ್ಲ. ಆದರೂ ನನಗೆ ನೀವು ಹೇಳುವುದಕ್ಕೆ ಬಂದಿದ್ದೀರಿ. ಇನ್ನು ಬೇಕಾದರೆ ನೀವು ಬನ್ನಿ, ಯಾವರೀತಿ ಹೋಗಬೇಕೆಂಬುದನ್ನು ನಿಮಗೆ ಹೇಳಿಕೊಡುತ್ತೇನೆ. ಆದನ್ನೆಲ್ಲ ಈ ರೀತಿ ಭಾಷಣದಿಂದ ನಿಲ್ಲಿಸುವುದಕ್ಕಾಗುವುದಿಲ್ಲ. ಮಾರ್ಗದ ಮಧ್ಯಂತರದಲ್ಲೆಲ್ಲ ಘಟನೆಗಳು ನಡೆಯುತ್ತವೆ. ಅವನ್ನೆಲ್ಲ ತಡೆಗಟ್ಟಲು ಸಮಾಜ ಕೂಡ ಪೋಲೀಸರಿಗೆ ಅದೇ ರೀತಿಯಲ್ಲಿ ಪ್ರೋತ್ಸಾಹಿಸಿ ಸಹಕಾರ ನೀಡಬೇಕು. ಇದರಿಂದ ಸಮಸ್ಯೆಗಳನ್ನು ಬಗೆಹರಿಸಲು ಅನುಕೂಲವಾಗುತ್ತದೆ. ಊರಿನಲ್ಲಿ ಒಂದು ಕಳ್ಳತನವಾದರೆ ಅಲ್ಲಿ ಕೇವಲ ೪ ಜನ ಪೋಲೀಸ್ ಪೇದೆಗಳಿಂದ ಅದನ್ನು ಪತ್ತೆ ಹಚ್ಚುವುದಕ್ಕಾಗುವುದಿಲ್ಲ, ಅದಕ್ಕೆ ಜನರೂ ಕೂಡ ಸಹಕಾರ ಕೊಟ್ಟರೆ ಕಳ್ಳರನ್ನು ಹಿಡಿಯಲು ಸಾಧ್ಯವಾಗುತ್ತದೆ. ಯಾರೂ ಸಹಕಾರವನ್ನೇ ನೀಡದಿದ್ದರೆ ಆ ಪೋಲೀಸರಿಗಾದರೂ ಹೇಗೆ ಹಿಡಿಯಲು ಸಾಧ್ಯವಾಗುತ್ತದೆ? ಹಳ್ಳಿಯಲ್ಲಿ ೪ ಜನರು ಇಂಥವನು ಬಂದು ಹೋಗಿದ್ದ, ೩ ದಿವಸದಿಂದ ಇಂಥ ಕಡೆ ತಿರುಗಾಡುತ್ತಿದ್ದ, ಇಂಥ ಕಡೆ ಮಲಗುತ್ತಿದ್ದ ಇತ್ಯಾದಿ ಸುಳಿವುಗಳನ್ನು ನೀಡಿದರೆ, ಆ ಒಂದು ಸುಳಿವಿನ ಆಧಾರದ ಮೇಲೆ ಕಳ್ಳರನ್ನು ಪತ್ತೆ ಮಾಡಬೇಕೇ ಹೊರತು ಬೇರೆ ಯಾವ ಮಾರ್ಗದಿಂದಲೂ ಸಾಧ್ಯವಾಗುವುದಿಲ್ಲ. ಕೈಗೆ ಸಿಕ್ಕಿದವರನ್ನು ಹಿಡಿದು ಕೊಂಡು ಹೋಗಿ ಪೋಲೀಸ್ ಠಾಣೆಯಲ್ಲಿ ಚಿತ್ರಹಿಂಸೆ ಕೊಟ್ಟರೆ ಅದು ಅಪರಾಧವಾಗುತ್ತದೆ, ಒಂದು ವೇಳೆ ಕಾಫಿ–ತಿಂಡಿ ಕೊಡಿಸಿದರೂ ಅದು ಅಪರಾಧವಾಗುತ್ತದೆ. ಹೀಗಿರುವಾಗ, ಜನರು ಸಹಕಾರ ನೀಡದಿದ್ದರೆ ಯಾವ ರೀತಿ ಕಳ್ಳರನ್ನು ಹಿಡಿಯಲು ಸಾಧ್ಯವಿದೆ? ಜನಗಳು ಸಹಕಾರ ಕೊಟ್ಟರೆ ಮಾತ್ರ ಸಾಧ್ಯತೆ ಉಂಟು. ಇವತ್ತಿನ ದಿವಸ ಪತ್ರಿಕೆಯಲ್ಲಿ ಪೋಲೀಸ್ ಸ್ಕ್ವಾಡ್ ಮಾಡಬೇಕೆಂಬ ನಿಮ್ಮ ಹೇಳಿಕೆಯನ್ನು ಓದಿದೆ. ಅದು ಒಳ್ಳೆಯ ಸಲಹೆಯಾಗಿದೆ. ಅದಕ್ಕೆ ಹೊಸ ಸಂವರ್ಧನದಲ್ಲಿ ಯಾವ ರೀತಿ ಕೋ–ಆರ್ಡಿನೇಟ್ ಮಾಡಬೇಕೆಂಬುದನ್ನು ಯೋಚಿಸಿ ಪ್ರಯತ್ನಿಸಬೇಕಾಗುತ್ತದೆ. ಅದನ್ನು ನಮ್ಮ ಮೆಷಿನರಿಯಲ್ಲಿ ಆಲೋಚಿಸಬೇಕು. ಅದನ್ನು ಸದುಪಯೋಗಪಡಿಸಿಕೊಳ್ಳುವುದಕ್ಕೆ ಯಾವ ರೀತಿ ಸಾಧ್ಯತೆ ಇದೆ ಎಂಬುದನ್ನು ಆಲೋಚಿಸಬೇಕು. ಆ ರೀತಿಯಾಗಿ ನಾವು ಪ್ರಯತ್ನ ಮಾಡಿ ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದೇವೆ. ಸ್ಪೆಷಲ್ ಸ್ಕ್ವಾಡನ್ನು ಇರಿಸುವುದು, ೫೦–೧೦ ಜೀಪುಗಳನ್ನು ಹೊಸದಾಗಿ ಕೊಡುವುದು, ಹೊಸ ಹೊಸ ಸ್ಕ್ವಾಡುಗಳನ್ನು ಹಾಕಿ ಅಪರಾಧಿತರು ಜಾಸ್ತಿ ತಿರುಗಾಡದಂತೆ ಮಾಡಬೇಕೆಂದು ಮಾಡಿದ್ದೇವೆ. ನೀವು ಡೆಲ್ಲಿಯಲ್ಲಿ ನೋಡಿರಬಹುದು, ಅದೇ ರೀತಿ ನಾವು ಕೂಡ ಇಲ್ಲಿ ಮಾಡಬೇಕೆಂದು ಮಾಡಿದ್ದೇವೆ. ಅಲ್ಲಿ ಸಂಜೆ ವೇಳೆ ಕೆಲವು ರಸ್ತೆಗಳಲ್ಲಿ ಅಡ್ಡಕಟ್ಟು ಹಾಕಿ ಪೋಲೀಸರು ನಿಂತಿರುತ್ತಾರೆ. ಯಾರಾದರೂ ಡಕಾಯಿತರು ಕಾರುಗಳಲ್ಲಿ ಹೋಗುತ್ತಾರೆಯೇ ಎಂಬುದನ್ನು ಅವರು ವೀಕ್ಷಿಸುತ್ತಿರುತ್ತಾರೆ, ಮತ್ತು ಅನುಮಾನ ಬಂದ ಕಾರುಗಳನ್ನು ನಿಲ್ಲಿಸಿ ವಿಚಾರಣೆ ಮಾಡುತ್ತಾರೆ. ಆದರೆ ನಮ್ಮ ಕಾರು, ನಮ್ಮ ಜೀಪು, ನಮ್ಮ ದುಡ್ಡು, ನಮ್ಮ ಪೆಟ್ರೋಲು ಹಾಕಿಕೊಂಡು ಓಡಾಡುತ್ತಿರುವಾಗ ನಮ್ಮನ್ನು ನಿಲ್ಲಿಸುವುದಕ್ಕೆ ಪೋಲೀಸರು ಯಾರು ಎಂದು ವಾದಿಸುವವರೂ ಇದ್ದಾರೆ. ಆ ಒಂದು ಕ್ರಮದಿಂದ ನೂರಕ್ಕೆ ನೂರು ಭಾಗ ಅಪರಾಧಗಳನ್ನು ತಡೆಗಟ್ಟಲು ಸಾಧ್ಯವಾಗದೆ ಇದ್ದರೂ ಸ್ವಲ್ಪ ಮಟ್ಟಿಗಾದರೂ ಭೀತಿ ಇರುತ್ತದೆಂಬ ಪ್ರಯತ್ನ ನಡೆದಿದೆ. ನಮ್ಮಲ್ಲೂ ಕೂಡ ನಾವು ಆ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಹೆಚ್ಚಿನ ರೀತಿಯಲ್ಲಿ ಎಲ್ಲ ಕಡೆ ತನಿಖೆ ಮಾಡುವುದಕ್ಕೆ ಅವಕಾಶ ಮಾಡೋಣ. ಕಾರಿನಲ್ಲಿ ಬರುತ್ತಾರೋ, ಜೀಪಿನಲ್ಲಿ ಬರುತ್ತಾರೋ ಎಂಬುದನ್ನು ನೋಡೋಣ. ಈ

ದಿಸೆಯಲ್ಲಿ ನಾವು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಆದಷ್ಟು ಜಾಗ್ರತೆ ಕಳ್ಳರನ್ನು, ಡಕಾಯಿತರನ್ನು ಕಂಡುಹಿಡಿಯುವುದಕ್ಕೆ ಸರ್ವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ೫ ಸಾವಿರವಾಗಲಿ ೧೦ ಸಾವಿರವಾಗಲಿ ಕಳ್ಳತನ ಎಂದರೆ ಅದು ಕಳ್ಳತನವೆ. ಅದನ್ನು ಕಂಡುಹಿಡಿಯುವುದಕ್ಕೆ ಚರ್ಚೆ ಮಾಡಿ ಸಿಗುವಂತಹ ಬಹಿರಂಗ ಸಲಹೆಗಳನ್ನು ಕೊಡುವುದಕ್ಕೆ ಇಷ್ಟವಿಲ್ಲದಿದ್ದವರು ಕಾಗದದ ಮೂಲಕ ಬರೆದು ಕಳುಹಿಸಿದರೆ ಆ ಸಲಹೆಗಳನ್ನು ಕೂಡ ನಾವು ಸ್ವೀಕರಿಸುತ್ತೇವೆ. ಈ ಬಗ್ಗೆ ಈಗಾಗಲೇ ಪೋಲೀಸ್ ಮುಖ್ಯಾಧಿಕಾರಿಗಳು ತಮಗೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನು ಕರೆದು ಮೀಟಿಂಗ್ ಮಾಡಿದ್ದಾರೆ. ೨-೩ ಕಡೆ ಇಂಥ ಪ್ರಕರಣಗಳು ನಡೆದ ಮೇಲೆ ಯಾಪ ರೀತಿ ಅವುಗಳನ್ನು ತಡೆಗಟ್ಟಬಹುದೆಂಬ ಬಗ್ಗೆ ದೀರ್ಘವಾಗಿ ಆಲೋಚಿಸಿ ಸರ್ವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಬಹುಶ: ಬೆಂಗಳೂರಿನಲ್ಲಿ ಅಂಥ ಪ್ರಕರಣಗಳು ಆಗದಂತೆ ತಡೆಹಿಡಿಯುವ ಭರವಸೆ ಇದೆ. ಈ ವಿಷಯದಲ್ಲಿ ತಮಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನಮಗೂ ಇದೆ ಇವತ್ತಿನ ದಿವಸ ನಮ್ಮ ಮನೆ ಮುಂದೆ ಪೋಲೀಸ್ ವ್ಯವಸ್ಥೆ ಇರಬಹುದು. ಆದರೆ ನಾನು ಯಾವಾಗಲೂ ಮುಖ್ಯಮಂತ್ರಿಯಾಗಿರುವುದಿಲ್ಲವಲ್ಲ? ಯಾವತ್ತೂ ನಾವೇ ಇರುತ್ತೇವೆಂದುಕೊಂಡಿದ್ದವರು ಕೂಡ ಇವತ್ತು ಇಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ನಮ್ಮ ನಮ್ಮ ರಕ್ಷಣೆಯ ಬಗ್ಗೆ ನಮಗೂ ಯೋಚನೆ ಇದೆ. ನಾನು ಕೂಡ ಹಳ್ಳಿಯಿಂದ ಬಂದಿರುವವನು. ಆದ್ದರಿಂದ ಈ ಬಗ್ಗೆ ತಾವು ಗಾಬರಿಪಡಬೇಕಾಗಿಲ್ಲ. ಇವತ್ತಿನ ದಿವಸ ನಾವು ಇಲಾಖೆಗೆ ಸ್ಪಷ್ಟ ಆದೇಶ ಕೊಟ್ಟಿದ್ದೇವೆ. ಆದರಂತೆ ಅವರು ಕೂಡ ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಎಲ್ಲರ ಸಹಕಾರವೂ ಅಗತ್ಯ. ಎಲ್ಲದಕ್ಕೂ ಪೋಲೀಸರು ಇದ್ದಾರೆಂಬುದನ್ನು ಬಿಟ್ಟು ಅವರಿಗೆ ಸಹಕಾರ ನೀಡಿದರೆ ತುಂಬ ಉಪಕಾರವಾಗುತ್ತದೆ ಮತ್ತು ಇಂಥ ಪ್ರಕರಣಗಳು ಕೂಡ ಕಡಿಮೆಯಾಗುತ್ತವೆಂಬ ಭರವಸೆ ನನಗಿದೆ. ಸಾಮಾನ್ಯವಾಗಿ, ಜನಸಂಖ್ಯೆ ಜಾಸ್ತಿ ಆದ ಹಾಗೆ ಇವೆಲ್ಲ ಬರುತ್ತವೆ. ಕಳ್ಳತನ ಮಾಡಲು ಬಂದವರು, ಕನ್ನಡದಲ್ಲಿ ಮಾತನಾಡಿದರೆ ಎಲ್ಲಿ ಕನ್ನಡದವರು ಎಂದು ತಿಳಿದುಕೊಂಡು ಹುಡುಕುತ್ತಾರೋ ಎಂದು ಭಾವಿಸಿ ಹಿಂದಿಯಲ್ಲಿ ಮಾತನಾಡಬಹುದು. ಏಕೆಂದರೆ, ಹಿಂದಿಯಲ್ಲಿ ಮಾತನಾಡಿದರೆ ಬೇರೆ ದೇಶದವರು ಎಂದು ತಿಳಿದುಕೊಳ್ಳಲಿ ಎಂದು. ಕೆಲವೊಮ್ಮೆ ಭಾಷೆ ಗೊತ್ತಿಲ್ಲದೆ ಹಿಂದಿಯಲ್ಲಿ ಮಾತನಾಡಬಹುದು. ಆದುದರಿಂದ ಈ ಬಗ್ಗೆ ಏನು ಹೇಳುವುದಕ್ಕೆ ಬರುವುದಿಲ್ಲ ಇಂಥ ಕೃತ್ಯಗಳು ಬಡಾವಣೆಗಳಲ್ಲಿ ನಡೆದಿವೆ. ಇದನ್ನು ನಿಲ್ಲಿಸುವುದಕ್ಕೆ ಎಲ್ಲ ರೀತಿಯ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಇಂಥ ಪ್ರಕರಣಗಳು ನಡೆಯದಂತೆ ನೋಡಿಕೊಳ್ಳಲು ಪೋಲೀಸರ ಜೊತೆಗೆ ಸಾರ್ವಜನಿಕರು ಕೂಡ ಸಹಕಾರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ರಾಮದೇವ್.—ಯಾರಾದರೂ ಸಿಕ್ಕಿದ್ದಾರೆಯೆ?

ಶ್ರೀ ಆರ್. ಗುಂಡೂರಾವ್.—ಇನ್‌ವೆಸ್ಟಿಗೇಷನ್‌ನಲ್ಲಿರುವಾಗ ಅದನ್ನು ಹೇಳುವುದಕ್ಕೆ ಬರುವುದಿಲ್ಲ.

೪-೦೦ ಪಿ. ಎಂ.

ಯಾರು ಸಿಕ್ಕಿದ್ದಾರೆ ಎಂದು ಹೆಸರು ಹೇಳಿದರೆ ಅವರು ಹೋಗಿ ಆರ್ಜಿ ಹಾಕುವುದು, ಲಾಯರ್ ಹತ್ತಿರ ಹೋಗುವುದು, ಬಿಡಿಸಿಕೊಂಡುಬರುವುದು ಇದೆಲ್ಲಾ ಉದ್ಭವವಾಗುತ್ತದೆ. ಆದರಿಂದ ಪ್ರಯೋಜನ ಏನೂ ಸಿಗುವುದಿಲ್ಲ. ಡಕಾಯಿತರ ವಿಷಯದಲ್ಲಿ ಉತ್ತರ ಪ್ರದೇಶ, ಮಧ್ಯಪ್ರದೇಶದಲ್ಲಿ ಆಗುತ್ತಿರುವ ತರಹ ಇಲ್ಲಿ ಅವಕಾಶ ಕೊಡುವುದು ಬೇಡ. Let us not make more publicity about it. Let us provide more men and vehicles and see that such things do not happen again. I once again request the general public to co-operate with the police and help the Government in curbing such activities.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಒಂದು ಸಲಹೆ ಕೊಡುತ್ತೇನೆ. ಬಹಳ ಮಹತ್ವದ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಎತ್ತಿದ್ದಾರೆ. ಅವರು ಹೇಳಿದ ಮಾತುಗಳನ್ನು ನಾನು ಒಪ್ಪುತ್ತೇನೆ ಕರ್ನಾಟಕ ಪೋಲೀಸರ ಬಗ್ಗೆ ನಮಗೂ ನಂಬಿಕೆ ಇದೆ, ಹೆಮ್ಮೆ ಇದೆ ಒಳ್ಳೆಯ ಹೆಸರಿದ್ದರೂ ಅವರಲ್ಲಿ ಕೆಲವರು ಇನ್‌ಕಾಂಪಿಟೆಂಟ್ ಇರುತ್ತಾರೆ. ಅಥವಾ ಬೇರೆ ತರಹ ಕೆಲಸಕ್ಕೆ ಬಾರದ ರೀತಿ ಇರುತ್ತಾರೆ. ಎಲ್ಲರೂ ಒಂದೇ ತರಹ ಇರುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ದರೋಡೆ ಪ್ರಕರಣಗಳು ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ. ಧಾರವಾಡ, ಬೆಳಗಾಂ ಭಾಗಗಳಲ್ಲಿ

ಹೆದ್ದಾರಿ ದರೋಡೆಯಾಗುತ್ತದೆ. ಪೋಲೀಸರ ಜೊತೆ ಸಾರ್ವಜನಿಕರೂ ಸಹಕಾರ ಕೊಡಬೇಕೆಂದು ಮಾನ್ಯ ಮಂಖ್ಯಮಂತ್ರಿಗಳು ಹೇಳಿದರು. ಆದರೆ ಸಾರ್ವಜನಿಕರು ಸಹಕಾರ ಕೊಡುವ ರೀತಿಯಲ್ಲಿ ಪೋಲೀಸರು ನಡೆದು ಕೊಳ್ಳಬೇಕು. ಪೋಲೀಸ್ ಸ್ಟೇಷನ್ನಿಗೆ ಯಾರಾದರೂ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ ಅವರ ಜೊತೆ ಪೋಲೀಸರು ಸರಿಯಾಗಿ ನಡೆದುಕೊಳ್ಳದಿದ್ದರೆ ಅಥವಾ ಅವರ ಕಂಪ್ಲೇಂಟಿಗೆ ಮಹತ್ವ ಕೊಡದೇ ಹೋದಾಗ ಜನರಿಗೆ ಬೇಜಾರಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಮನೆಯಲ್ಲಿ ಒಂದು ದೊಡ್ಡ ಬೀಗದ ಕೈಗೊಂಚಲು ಬಿದ್ದಿತ್ತು. ಅದನ್ನು ಸಂಬಂಧಪಟ್ಟ ಪೋಲೀಸ್ ಸ್ಟೇಷನ್ನಿಗೆ ಕಳುಹಿಸಿಕೊಟ್ಟೆ. ಎಸ್. ಪಿ. ಜೊತೆ ನೇರವಾಗಿ ಮಾತನಾಡಿದರೆ ಸರಿಹೋಗುವುದಿಲ್ಲ ಎಂದು ಪಿ.ಎಸ್.ಐ. ಜೊತೆ ಮಾತನಾಡಿ ಎಲ್ಲ ವಿಚಾರವನ್ನೂ ಹೇಳಿದೆ. ಇದರ ಜೊತೆಗೆ ಮನೆಯಲ್ಲಿ ಇಬ್ಬರು ಹೆಣ್ಣುಮಕ್ಕಳಿರುವಾಗ ಯಾರೋ ಒಳಗೆ ನುಗ್ಗಲು ಪ್ರಯತ್ನ ಮಾಡಿದ್ದರು. ಈ ವಿಚಾರ ಗಳನ್ನು ಪೋಲೀಸರಿಗೆ ಹೇಳಿದಾಗ ಅವರು ಸರಿಯಾಗಿ ತನಿಖೆ ಮಾಡಲಿಲ್ಲ. ಮತ್ತೊಬ್ಬ ಪೋಲೀಸ್ ಅಧಿ ಕಾರಿ ಬಂದಾಗ ನಾನು ಹೇಳಿದ ಮೂರು ದಿವಸಗಳಲ್ಲಿ ಕ್ರಮ ತೆಗೆದುಕೊಂಡ. ಹೀಗೆ ಕೆಲವು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿದರೆ ಕೆಲವರು ಸರಿಯಾಗಿ ಮಾಡುವುದಿಲ್ಲ. ಯಾವುದೇ ಅಧಿಕಾರಿಗಳ ಮೇಲೆ ವೈಯಕ್ತಿಕವಾದ ದ್ವೇಷ ನಮಗಿರುವುದಿಲ್ಲ. ಒಂದೊಂದು ಸಲ ಒಂದೊಂದು ಜಾಗದಲ್ಲಿ ಸರಿಯಾಗಿ ಸಮರ್ಥವಾಗಿ ಕೆಲಸ ಮಾಡದಿದ್ದರೆ ಅಂಥ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗಮಾಡಬೇಕಾಗುತ್ತದೆ. ಇಂಥ ವಿಷಯಗಳನ್ನು ಪ್ರಿಸ್ಟೀಜ್ ಇಷ್ಯೂ ಎಂದು ತಿಳಿದುಕೊಳ್ಳಬಾರದು. ಯಾವುದೇ ಜಾಗದಲ್ಲಿರತಕ್ಕ ಅಧಿಕಾರಿ ಸರಿಯಾಗಿ ಕೆಲಸ ಮಾಡದಿದ್ದರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲರಿಗೂ ಒಂದೇ ರೀತಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಕೆಲಸವನ್ನು ಜೆನ್ನಾಗಿ ಮಾಡುತ್ತಾರೆ. ಉದಾಹರಣೆಗೆ ಒಬ್ಬ ಅಧಿಕಾರಿಗೆ ಕೈಲಾ ಹಿಡಿಯತಕ್ಕ ಕೆಲಸದಲ್ಲಿ ಚಾತುರ್ಯತೆ ಇರಬಹುದು. ಇನ್ನೊಬ್ಬ ಅಧಿಕಾರಿ ಇನ್ನೊಂದು ಕೆಲಸಕ್ಕೆ ಹೊಂದಿಕೊಳ್ಳಬಹುದು. ಅದನ್ನು ನೋಡಿ ಕೊಂಡು ಕೆಲಸ ಮಾಡಬೇಕಾಗುತ್ತದೆ. ಸರಿಯಾಗಿ ಯಾರಾದರೂ ಕೆಲಸ ಮಾಡದಿದ್ದರೆ ಅವರನ್ನು ವರ್ಗ ಮಾಡುವುದು ಒಂದು ರೆಮಿಡಿ ಅಷ್ಟೆ. ಸಾರ್ವಜನಿಕರ ಸಹಕಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿ ಗಳು ಹೇಳಿದ್ದಾರೆ. ಹಳ್ಳಿಗಳಲ್ಲಿ ರೈತ ಬೆಳೆದಿದ್ದನ್ನು ಮನೆಗೆ ತರುವುದೇ ಕಷ್ಟವಾಗಿದೆ. ಆ ಬಗ್ಗೆ ನೂರಾರು ದೂರುಗಳಿವೆ. ಈ ತೊಂದರೆಗಳನ್ನು ತಪ್ಪಿಸಲು ಹಳ್ಳಿಗಳಲ್ಲಿರುವ ರೈತರೇ ಸಂಘಟನೆ ಮಾಡಿ ಕೊಂಡು ರಾತ್ರಿಪಾಳಿ ಮಾಡಿಕೊಂಡು ತಮ್ಮ ಆಸ್ತಿಪಾಸ್ತಿಗಳನ್ನು ಕಾಪಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ ಕೊಡಬೇಕು. ಹೋಂಗಾರ್ಡ್ಗಳಿರುವಂತೆ ವಿಲೇಜ್ ಗಾರ್ಡ್ಗಳಿಗೆ ಅವಕಾಶ ಮಾಡಿಕೊಡಬೇಕು. ಕಾನೂನು ಪ್ರಕಾರವಾಗಿ ಪೋಲೀಸರಿಗೂ ಇವರಿಗೂ ಸಂಬಂಧವಿರುವಂತೆ ಮಾಡಿ ಇಬ್ಬರೂ ಸೇರಿ ಹಳ್ಳಿ ಗಳಲ್ಲಿ ಆಗುವ ಬೆಳೆಗಳ ಕಳ್ಳತನ, ಮನೆ ದರೋಡೆಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಬ್ಬರೂ ಸೇರಿ ಕೆಲಸ ಮಾಡತಕ್ಕ ಸಂಸ್ಥೆ ಬರತಕ್ಕ ರೀತಿಯಲ್ಲಿ ಕಾನೂನು ತಂದರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಕಾನೂನು ಪ್ರಕಾರ ಅವಕಾಶ ಮಾಡಿಕೊಡದೇ ಜನರೇ ಮಾಡುವುದಕ್ಕೆ ಹೋದರೆ ನೀನು ಯಾರು ಎಂದು ಕೇಳುತ್ತಾರೆ ಆದ್ದರಿಂದ ಪೋಲೀಸರಿಗೆ ಸಹಾಯ ಮಾಡುವುದಕ್ಕೆ ಆಸಕ್ತಿ ಇದ್ದ ಜನರಿಗೆ ಅವಕಾಶ ಮಾಡಿಕೊಡಬೇಕು. ಹಿಂದೆ ಪೋಲೀಸ್ ಪಟೇಲರು ಇದ್ದರು. ಅವರು ಹೋದ ವೆ ಲೆ.....

ಛೇರ್ಮನ್.—ಈಗ ಆ ಬಗ್ಗೆ ಚರ್ಚೆ ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಾರ್ವಜನಿಕರಿಗೂ ಪೋಲೀಸರಿಗೂ ಸಹಕಾರ ಸಿಗುವಂತೆ ವ್ಯವಸ್ಥೆ ಮಾಡಿ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಮುಖ್ಯಮಂತ್ರಿಗಳು ಅನಿರೀಕ್ಷಿತ ಭೇಟಿ ನೀಡುತ್ತೇನೆ ಎಂದು ಹೇಳಿದ್ದರು. ಈಗಲೂ ಆ ರೀತಿ ಭೇಟಿ ಕೊಟ್ಟು ತಾವು ಬರುತ್ತೀರಿ ಎಂಬ ಭಯ ಹುಟ್ಟುವಂತೆ ಮಾಡಿ ಪೋಲೀಸ್ ನಾಯಿಗಳ ಬಗ್ಗೆ ಹೇಳಬೇಕೆಂದರೆ ಹಿಂದಿನಿಂದ ಪೋಲೀಸರು ಹೇಗಿದ್ದರೋ ಆ ನಾಯಿಗಳೂ ಹಾಗೇ ಇವೆ. ಹಿಂದೆ ಇದ್ದ ಹಳೇ ನಾಯಿಗಳೇ ಇದ್ದರೆ ಅದನ್ನು ಬದಲಾವಣೆ ಮಾಡಬೇಕು ವಯಸ್ಸಾದ ಮೇಲೆ ಇಟ್ಟುಕೊಳ್ಳುವುದು ಒಳ್ಳೆಯದಲ್ಲ ಆದ್ದರಿಂದ ನಾಯಿಗಳನ್ನು ಬದಲಾವಣೆ ಮಾಡಬೇಕು ಅದರ ಜೊತೆಯಲ್ಲಿ ಕೆಲವು ಅಧಿಕಾರಿಗಳನ್ನೂ ಬದಲಾವಣೆ ಮಾಡಬೇಕು.